ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19 :** **ದಿನಾಂಕ : 23–08–2018**

# ಪತ್ರಿಕಾ ಆಮಂತ್ರಣ

1. ವಿಧಾನಮಂಡಲದ 2018–19 ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

   ಪ್ರಾರಂಭಿಕ ಸಭೆ

   ದಿನಾಂಕ: 24–08–2018 ಶುಕ್ರವಾರ ಸಮಯ: ಬೆಳಿಗ್ಗೆ 11–30

   ಸ್ಥಳ: ಕೊಠಡಿ ಸಂಖ್ಯೆ 106, 1 ನೇ ಮಹಡಿ, ವಿಧಾನಸೌಧ, ಬೆಂಗಳೂರು

2. ಪುಸ್ತಕ ಪ್ರಾಧಿಕಾರದ ಬೆಳ್ಳಿ ಹಬ್ಬದ ಸಂಭ್ರಮ ಆಚರಣೆ ಕುರಿತು ಪತ್ರಿಕಾಗೋಷ್ಠಿ:

   ಡಾ: ವಸುಂಧರಾ ಭೂಪತಿ,
   ಅಧ್ಯಕ್ಷರು
   ಕನ್ನಡ ಪುಸ್ತಕ ಪ್ರಾಧಿಕಾರ

   ದಿನಾಂಕ: 24–08–2018 ಶುಕ್ರವಾರ ಸಮಯ: ಮಧ್ಯಾಹ್ನ 3–00 ಗಂಟೆಗೆ

   ಸ್ಥಳ: ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲ ಮಹಡಿ, ಬೆಂಗಳೂರು

# ಪತ್ರಿಕಾ ಪ್ರಕಟಣೆ

**ಸಂಖ್ಯೆ: 867/967**

## ಸಚಿವ ಸಂಪುಟ ಸಭೆ

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

**ಸಚಿವ ಸಂಪುಟದ 2018 ನೇ ಸಾಲಿನ 6 ನೇ ಸಭೆಯನ್ನು ಸಂಜೆ 4 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ಕರೆಯಲಾಗಿದೆ.**

**ಸಂಖ್ಯೆ: 868/968**

# <u>ನಗರದಲ್ಲಿ ಕಸ ಸಂಸ್ಕರಣಾ ಘಟಕದ ಸ್ಥಾಪನೆಗೆ ಚಿಂತನೆ</u>

**ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್**

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ಕರ್ನಾಟಕ ಸಹಕಾರ ಮಹಾಮಂಡಳವು ಹಾಲಿ ಇರುವ ವ್ಯಾಪಾರ ಚಟುವಟಿಕೆಗಳನ್ನು ವಿಸ್ತರಿಸುವ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಸ ಸಂಸ್ಕರಿಸಲು, ಸಂಸ್ಕರಣಾ ಘಟಕವನ್ನು ಪ್ರಾರಂಭಿಸಿ ಇದರ ಮೂಲಕ ಗೊಬ್ಬರ ತಯಾರಿಸಿ ರೈತರಿಗೆ ಹಾಗೂ ಸಾರ್ವಜನಿಕರಿಗೆ ವಿತರಣೆ ಮಾಡುವ ಬಗ್ಗೆ ಚಿಂತಿಸಿದೆ ಎಂದು ಮಹಾಮಂಡಳದ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್ ಅವರು ತಿಳಿಸಿದರು.

ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಕಚೇರಿಯಲ್ಲಿ ಇಂದು ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಈ ಸಂಬಂಧ ಈಗಾಗಲೇ ನೆರವು ಮತ್ತು ಮಾರ್ಗದರ್ಶನ ಕೋರಿ ಬೆಂಗಳೂರು ಮಹಾನಗರಪಾಲಿಕೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ರಾಜ್ಯದ ರೈತರಿಗೆ ಬೇಕಾಗುವ ರಸಗೊಬ್ಬರ ಕೀಟನಾಶಕಗಳನ್ನು ಸಹಕಾರ ಸಂಘಗಳ ಮೂಲಕ ವಿತರಣೆ ಮಾಡುವುದು ಮತ್ತು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ನೀಡಿ ಖರೀದಿ ಮಾಡುವುದರ ಜೊತೆಗೆ ಸ್ವಂತ ಬಂಡವಾಳ ಹೂಡಿ ರೈತ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಸಂಸ್ಥೆಯು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು 39 ಶಾಖೆಗಳನ್ನು ಹೊಂದಿದ್ದು ತನ್ನದೇ ಆದ ಸಂಪನ್ಮೂಲಗಳನ್ನು ಕ್ರೋಢಿಕರಿಸಿಕೊಂಡಿದೆ. ಅಲ್ಲದೆ, ಉತ್ತಮವಾಗಿ ವ್ಯವಹಾರ ವಹಿವಾಟು ನಡೆಸುತ್ತಾ ಬಂದಿದ್ದು, ಕಳೆದ 10 ವರ್ಷಗಳಿಂದಲೂ ಸಂಸ್ಥೆಯು ಲಾಭಗಳಿಸುತ್ತಾ ಬಂದಿದೆ ಎಂದು ತಿಳಿಸಿದ ಅವರು ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ತನ್ನದೇ ಆದ ಸ್ವಂತ ಗೋದಾಮು ಮತ್ತು ಕಟ್ಟಡಗಳನ್ನು ಹೊಂದಿದ್ದು, ರೈತರಿಗೆ ಕೃಷಿ ಪರಿಕರಗಳು ಮತ್ತು ರೈತರು ಬೆಳೆದ ಕೃಷಿ ಉತ್ಪನ್ನ ಶೇಖರಣೆ ಮಾಡಲು ಎಲ್ಲಾ ಸೌಲಭ್ಯಗಳನ್ನು ಹೊಂದಿದೆ ಎಂದು ತಿಳಿಸಿದರು.

ಕರ್ನಾಟಕ ಸಹಕಾರ ಮಾರಾಟ ಮಂಡಳವು ಸರ್ಕಾರದ ಪರವಾಗಿ ರೈತರಿಗೆ ರಸಗೊಬ್ಬರ ವಿತರಣೆ ಮಾಡುವ ಸಂಬಂಧ ರಾಜ್ಯ ಸರ್ಕಾರದ ಕಾಪು ದಾಸ್ತಾನು ಯೋಜನೆಯನ್ನು ನಿರ್ಮಾಣ ಮಾಡುತ್ತಿದೆ ಹಾಗೂ ಸ್ವಂತ ಬಂಡವಾಳದಿಂದ 2017-18 ನೇ ಸಾಲಿನಲ್ಲಿ ರೈತರಿಗೆ 232.57 ಕೋಟಿ ರೂ. ಮೌಲ್ಯದ ರಸಗೊಬ್ಬರ ಹಾಗೂ ಕೃಷಿ ಸಲಕರಣೆಗಳನ್ನು ವಿತರಣೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಪ್ರತಿ ವರ್ಷ ರಾಜ್ಯದಲ್ಲಿ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಲಾಗುತ್ತಿದ್ದು, 2016-17 ನೆ ಸಾಲಿನಲ್ಲಿ 1030 ಕೋಟಿ ರೂ. ಮೌಲ್ಯದ ಕೃಷಿ ಉತ್ಪನ್ನಗಳನ್ನು ರೈತರಿಂದ ಖರೀದಿ ಮಾಡಲಾಗಿದ್ದು, 2017-18 ನೇ ಸಾಲಿನಲ್ಲಿ 2645.90 ಕೋಟಿ ರೂ. ಮೌಲ್ಯದ ಕೃಷಿ ಉತ್ಪನ್ನಗಳ ವಹವಾಟು ಕೈಗೊಳ್ಳಲಾಗಿರುತ್ತದೆ ಎಂದರು.

ಮಹಾಮಂಡಳವು ಸತತ 10 ವರ್ಷಗಳಿಂದ ನಿವ್ವಳ ಲಾಭಗಳಿಸುತ್ತಾ ಬಂದಿದ್ದು, 2016-17 ನೇ ಸಾಲಿನಲ್ಲಿ 32.06 ಕೊಟಿ ರೂ. ಹಾಗೂ 2017-18 ನೇ ಸಾಲಿನಲ್ಲಿ ಅಂದಾಜು 35.26 ಕೋಟಿ ರೂ. ಗಳಷ್ಟು ನಿವ್ವಳ ಲಾಭಗಳಿಸುತ್ತದೆ ಎಂದು ತಿಳಿಸಿದ ಮಹಾಮಂಡಳದ ಅಧ್ಯಕ್ಷರು 2015-16 ನೇ ಸದಸ್ಯ ಸಂಘಗಳು ಪಾವತಿಸಿರುವ ಷೇರುಗಳ ಮೇಲೆ ಶೇ 20 ರಂತೆ ಷೇರು ಲಾಭಾಂಶ (ಡಿವಿಡೆಂಡ್) ಹಂಚಿಕೆ ಮಾಡಲಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ರಾಜ್ಯದ 177 ಮತ್ತು ಹೊಸದಾಗಿ ರಚಿತವಾಗಿರುವ ತಾಲ್ಲೂಕು ಕೇಂದ್ರಗಳಲ್ಲಿ ಮಹಾಮಂಡಳವು ತನ್ನ ಶಾಖಾ ಕಚೇರಿಗಳನ್ನು ತೆರೆಯುವ ಮೂಲಕ ರಸಗೊಬ್ಬರ ಹಾಗೂ ಕೃಷಿ ಪರಿಕರಗಳ ವಿತರಣೆ ಜೊತೆಗೆ ರೈತರಿಗೆ ಉತ್ತಮ ಗುಣಮಟ್ಟದ ಸಾವಯವ ಗೊಬ್ಬರ ವಿತರಣೆಗೆ ಹೆಚ್ಚಿನ ಆದ್ಯತೆ ನೀಡಿ ಕೆಲಸಮಾಡಲಾಗುವುದು ಎಂದ ಇತ್ತೀಚಿನ ದಿನಗಳಲ್ಲಿ ಜಲ ಪ್ರಳಯದಿಂದಾಗಿ ಹಾನಿಗೀಡಾಗಿರುವ ಕೊಡಗು ಮತ್ತು ಕೇರಳ ರಾಜ್ಯಕ್ಕೆ ಮಹಾಮಂಡಳವು ನೆರವಿಗೆ ಧಾವಿಸಿದ್ದು, ಮಂಡಳಿಯ ಸಿಬ್ಬಂದಿ ಒಂದು ದಿನದ ವೇತನದ ಜೊತೆಗೆ ಮಹಾಮಂಡಳವು ಕೂಡಾ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆಯನ್ನು ನೀಡುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಂಡಳದ ಉಪಾಧ್ಯಕ್ಷರಾದ ಬಸವನಗೌಡ ರಾಮೇಗೌಡ ಪಾಟೀಲ್ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು, ಹಾಗೂ ನಿರ್ದೇಶಕರುಗಳಾದ ಜೆ.ಆರ್. ಷಣ್ಮುಖಪ್ಪ, ಡಿ.ಎಲ್. ಮಂಜುನಾಥ, ಡಿ. ಹುಮಂತಯ್ಯ, ಗುರುನಾಥ ರಡ್ಡಿ, ತಿಮ್ಮಣ್ಣ ಮೆಳ್ಳಿ ಹಾಗೂ ಪ್ರಧಾನ ವ್ಯವಸ್ಥಾಪಕರಾದ ಭೀಮರಾಯ ಬಸಪ್ಪ ಗುಡ್ಡದ ಅವರು ಉಪಸ್ಥಿತರಿದ್ದರು.

**ಸಂಖ್ಯೆ: 869/969**

## ಕುಲ್‌ದೀಪ್‌ನಯ್ಯರ್ ಅವರ ನಿಧನಕ್ಕೆ ಸಚಿವ ಕೃಷ್ಣಬೈರೇಗೌಡ ತೀವ್ರ ಶೋಕ

ಬೆಂಗಳೂರು: ಆಗಸ್ಟ್ 23 – ಖ್ಯಾತ ಪತ್ರಕರ್ತ, ಅಂಕಣಕಾರ, ಲೇಖಕ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತ ಕುಲ್‌ದೀಪ್‌ನಯ್ಯರ್ ಅವರ ನಿಧನಕ್ಕೆ ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್ ರಾಜ್, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣಬೈರೇಗೌಡ ರವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಭಾರತದ ಪತ್ರಿಕೋದ್ಯಮದಲ್ಲಿ ತಮ್ಮ ವಿಶಿಷ್ಠ ಬರಹ ಮತ್ತು ಮೊನಚು ದೃಷ್ಠಿಕೋನಗಳ ಮೂಲಕ ಹೆಸರು ಮಾಡಿದ್ದ ಕುಲ್‌ದೀಪ್‌ನಯ್ಯರ್ ಒಂದು ತಲೆಮಾರಿನ ಪತ್ರಿಕೋದ್ಯಮವನ್ನು ಪ್ರಭಾವಿಸಿದ್ದವರು. ಜೊತೆಗೆ ಬ್ರಿಟನ್ನಿನಲ್ಲಿ ಭಾರತದ ಹೈಕಮೀಷನರ್‌ರಾಗಿ ಹಾಗೂ ರಾಜ್ಯಸಭಾ ಸದಸ್ಯರಾಗಿ ಸಹ ಸೇವೆ ಸಲ್ಲಿಸಿದ್ದರು. 15ಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದ್ದ ಕುಲ್‌ದೀಪ್‌ನಯ್ಯರ್ ಮಾನವ ಹಕ್ಕುಗಳ ಕಾರ್ಯಕರ್ತರಾಗಿಯೂ ಹೆಸರು ಮಾಡಿದ್ದರು. ತಮ್ಮ ಬರವಣಿಗೆಯ ಮೂಲಕ ರಾಜಕೀಯವನ್ನು ಸಹ ಪ್ರಭಾವಿತರನ್ನಾಗಿ ಮಾಡಿದ್ದ ಕುಲ್‌ದೀಪ್‌ನಯ್ಯರ್ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗೆ ಸಂಪಾದಕರಾಗಿಯೂ ಅದಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದ್ದರು. ಇಂಡಿಯನ್ ಎಕ್ಸ್‌ಪ್ರೆಸ್‌ನಿಂದ ನಿವೃತ್ತರಾದ ನಂತರವೂ ಅನೇಕ ಪತ್ರಿಕೆಗಳಿಗೆ ಅಂಕಣ ಬರಹಗಾರರಾಗಿ ಸಮಾಜವನ್ನು ತಿದ್ದುತ್ತಿದ್ದ ಕುಲ್‌ದೀಪ್‌ನಯ್ಯರ್ ಸಮಕಾಲಿನ ಪತ್ರಿಕೋದ್ಯಮದ ಶ್ರೇಷ್ಠ ಚಿಂತಕ ಹಾಗೂ ಬರಹಗಾರ. ಇಂದಿನ ಕಿರಿಯ ಪತ್ರಕರ್ತರಿಗೆ ಕುಲ್‌ದೀಪ್‌ನಯ್ಯರ್ ಒಂದು ಅಸದೃಶ ಮಾದರಿ ಎಂದರೆ ಅತಿಶಯೋಕ್ತಿ ಅಲ್ಲ. ಅವರ ನಿಧನದಿಂದ ಭಾರತೀಯ ಪತ್ರಿಕೋದ್ಯಮ ಶ್ರೇಷ್ಠ ಪರ್ತಕರ್ತ ಹಾಗೂ ಬರಹಗಾರನನ್ನು ಕಳೆದುಕೊಂಡಿದೆ ಎಂದು ಸಚಿವ ಕೃಷ್ಣಬೈರೇಗೌಡ ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 870/970**

## ಧೈರ್ಯ ಸಾಹಸ ಪ್ರದರ್ಶಿಸಿದ ಮಕ್ಕಳಿಗೆ ನೀಡುವ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ 6 ರಿಂದ 18 ವರ್ಷದೊಳಗಿನ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಪ್ರಶಸ್ತಿಯನ್ನು ಮಕ್ಕಳ

ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡುತ್ತದೆ. ಪ್ರಕರಣವು ಆಗಸ್ಟ್ 2017 ರಿಂದ ಜುಲೈ 2018ರೊಳಗೆ ನಡೆದಿರಬೇಕು. ದಿನಾಂಕ: 01.08.2000 ರಂದು ಹಾಗೂ ನಂತರ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ.10,000/-ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

2018ನೇ ಸಾಲಿನ ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ದಿನಾಂಕ:31.08.2018ರೊಳಗೆ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿಯೇ ಸಲ್ಲಿಸತಕ್ಕದ್ದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 871/971**

APPLICATIONS INVITED

**Bengaluru August 23 (Karnataka Information)**

The Department of Women and Child Development, Government of Karnataka on the occasion of Children's Day, confers Bravery Award for the Children in the age group of 6 to 18 years who have exhibited exceptional courage and presence of mind to save the life of others in dangerous circumstances. Boys are identified under "Hoysala" and girls under "Keladi Chennamma" Award. The incident should have occurred between August 2017 to July 2018. Children born on or after 01.08.2000 are eligible for this Award. The Award carries cash prize of Rs. 10,000/- and a citation.

The prescribed forms for the year 2018 may be obtained from the Deputy Director of Women & Child Development Department in the respective

Districts. The filled applications should be submitted to the concerned District Deputy Director of Women & Child Development Department on or before 31.08.2018. The applications should be submitted in Kannada only says official press release.

**ಸಂಖ್ಯೆ: 872/972**

# ಎಸಿಬಿ ದಾಳಿ

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ವತಿಯಿಂದ ಸಾರ್ವಜನಿಕ ಸಂಪರ್ಕ ಸಭೆಯನ್ನು ಉಪನೊಂದಣಾಧಿಕಾರಿಗಳ ಕಛೇರಿ, ಕೆಂಗೇರಿ, ಬೆಂಗಳೂರು ನಗರ ಇಲ್ಲಿನ ನೆಲಮಹಡಿಯಲ್ಲಿ ದಿನಾಂಕ;24-08-2018 ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆ ವರೆಗೆ ಆಯೋಜಿಸಲಾಗಿದೆ.

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ಈ ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರಿಂದ ಸರ್ಕಾರದ ಕೆಲಸಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ. ಸಾರ್ವಜನಿಕರು ಈ ಸಭೆಗೆ ಹಾಜರಾಗಿ ತಮ್ಮ ದೂರುಗಳನ್ನು ನೀಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ.ಶಿವಶಂಕರರೆಡ್ಡಿ.ಬಿ, ಪೊಲೀಸ್ ಉಪಾಧೀಕ್ಷಕರು, (ಮೊಬೈಲ್ ನಂ.9480806213) ಮತ್ತು ಶ್ರೀ.ಸುಬ್ರಮಣ್ಯಸ್ವಾಮಿ, ಪೊಲೀಸ್ ನಿರೀಕ್ಷಕರು (ಮೊಬೈಲ್ ನಂ.9480806251) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**ಸಂಖ್ಯೆ: 873/973**

**ಬೆಂಗಳೂರು ಜಲಮಂಡಲಿ : ಆಗಸ್ಟ್ 24 ರಂದು ಪೂರ್ವ–4 ಉಪವಿಭಾಗದಲ್ಲಿ ನೀರಿನ ಅದಾಲತ್**

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ಬೆಂಗಳೂರು ಜಲಮಂಡಲಿಯ (ಪೂರ್ವ–4) ಉಪವಿಭಾಗದಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ: 24.08.2018 ರಂದು (ಪೂರ್ವ–4) ಉಪವಿಭಾಗ ವ್ಯಾಪ್ತಿಗೆ ಬರುವ ಎ.ನಾರಾಯಣಪುರ, ವಿಜ್ಞಾನ ನಗರ, ಜಗದೀಶ್‌ನಗರ, ದೊಡ್ಡನಕುಂದಿ ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಕೆ.ಆರ್.ರೈಲ್ವೆ ನಿಲ್ದಾಣದ ಎದುರು, ಪಟಾಲಮ್ಮ ದೇವಸ್ಥಾನದ ಹತ್ತಿರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಪೂರ್ವ–4) ರ ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ–1) 22945169. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ–4) ಉಪವಿಭಾಗ–28510008

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರುನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ–22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ–8762228888 ಗೆ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 874/974**

BWSSB:Water Adalath in East-4 sub division on August 24th

**Bengaluru August 23 (Karnataka Information)**

BWSSB water Adalath is held on 24.08.2018 in (East -4) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of A. Narayanapura, Vignana Nagar,Jagadish Nagar, Doddanakundi Service station coming under (East-4) sub division, will be discussed in detail & problems will be settled in the office of the Assistant Executive Engineer (East-4) sub division, opposite to K.R. Railway Satation, Near Pattalamma Temple.

Details regarding the adalath can be obtained by the office of EE (South East-1) :22945169, or office of AEE (East-4):28510008.

For any problems regarding the water supply and all, publics can contact 24x7 call centre :22238888 helpline number:1916 & whats app no: 8762228888 says official press release.

**ಸಂಖ್ಯೆ: 875/975**

## ಸಚಿವರ ಪ್ರವಾಸ

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ಕೃಷಿ ಸಚಿವ ಎನ್. ಹೆಚ್. ಶಿವಶಂಕರರೆಡ್ಡಿ ಅವರು ಆಗಸ್ಟ್ 24 ರ ಶುಕ್ರವಾರಂದು ಆಂದ್ರ ಪ್ರದೇಶ ಆನಂತಪುರ ಜಿಲ್ಲೆಗೆ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ತಂತ್ರಜ್ಞಾನದ ಅನುಷ್ಠಾನ ಕುರಿತು ಕ್ಷೇತ್ರ ಭೇಟಿ ನೀಡಿ ಅಂದೇ ನಗರಕ್ಕೆ ಹಿಂದಿರುಗುವರು.

**ಸಂಖ್ಯೆ: 876/976**

## ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಸಂಗೀತ ನೃತ್ಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಕನ್ನಡದ ಉತ್ತಮ ಪುಸ್ತಕಕ್ಕೆ ಬಹುಮಾನ ನೀಡಲು ಅರ್ಜಿಯನ್ನು ಆಹ್ವಾನಿಸಿದೆ.

ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ, ಸುಗಮ ಸಂಗೀತ, ನೃತ್ಯ, ಕಥಾಕೀರ್ತನ, ಗಮಕ ಈ ಕಲಾಪ್ರಕಾರಗಳಲ್ಲಿ 2018-19 ನೇ ಸಾಲಿಗೆ 2017 ಜನವರಿಯಿಂದ ಡಿಸೆಂಬರ್ ಒಳಗೆ ಪ್ರಕಟಿಸಿರುವ ಪುಸ್ತಕಗಳನ್ನು ಬಹುಮಾನಕ್ಕೆ ಸಲ್ಲಿಸಬಹುದು.

ಪುಸ್ತಕ ಬಹುಮಾನಕ್ಕೆ ಸಲ್ಲಿಸುವ ಪುಸ್ತಕವನ್ನು ಪಠ್ಯಕ್ಕಾಗಿ ಸಿದ್ದಪಡಿಸಿರಬಾರದು. ಸಂಪಾದಿತ ಕೃತಿಯಾಗಿರಬಾರದು. ಸ್ವರಚಿತವಾಗಿರಬೇಕು. ಪ್ರಥಮ ಮುದ್ರಣಾವೃತ್ತಿಯಾಗಿರಬೇಕು. ಬಹುಮಾನಕ್ಕೆ ಅರ್ಜಿ ಸಲ್ಲಿಸುವವರು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002. ಇವರಿಗೆ ದಿನಾಂಕ: 31-08-2018 ರ ಒಳಗಾಗಿ ಅರ್ಜಿಯೊಂದಿಗೆ ಪುಸ್ತಕದ 4 ಪ್ರತಿಗಳನ್ನು ಕಳುಹಿಸುವುದು.

ಅರ್ಜಿಯನ್ನು ಕಚೇರಿ ವೇಳೆಯಲ್ಲಿ ಅಕಾಡೆಮಿಯಿಂದ ಪಡೆಯಬಹುದು ಹಾಗೂ ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಯಲ್ಲಿ ಪಡೆಯಬಹುದಾಗಿದೆ ಹಾಗೂ ಅಕಾಡೆಮಿ ಅಂತರ್ಜಾಲ ತಾಣ www.karnatakasangeetanrityaacademy.com ಮೂಲಕ ಪಡೆಯಹಬಹುದಾಗಿದೆ ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 878/978**

## ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ 23, (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2018-19 ನೇ ಸಾಲಿನ ಶಿಷ್ಯವೇತನಕ್ಕಾಗಿ ಅರ್ಹ ಅಭರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಶಾಸ್ತ್ರೀಯ ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ, ನೃತ್ಯ, ಸುಗಮ ಸಂಗೀತ, ಕಥಾಕೀರ್ತನ ಮತ್ತು ಗಮಕ-ಈ ಆರು ಕಲಾಕ್ಷೇತ್ರದಲ್ಲಿ ಅಭ್ಯಾಸ ಮಾಡುತ್ತಿರುವ 16 ರಿಂದ 24 ವರ್ಷ ವಯೋಮಾನದ ಒಳಗಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ 10,000-00 ಗಳನ್ನು ಶಿಷ್ಯವೇತನವಾಗಿ ನೀಡಲಾಗುವುದು. ಅರ್ಜಿಗಳನ್ನು ಅಕಾಡೆಮಿಯ ಕಚೇರಿ ವೇಳೆಯಲ್ಲಿ (ಬೆಳಿಗ್ಗೆ 10.00 ರಿಂದ ಸಂಜೆ 5.30 ಗಂಟೆವರೆಗೆ) ಉಚಿತವಾಗಿ ಪಡೆಯಬಹುದು. ಅಲ್ಲದೇ ಅಕಾಡೆಮಿ ಅಂತರ್ಜಾಲ ತಾಣ www.karnatakasangeetanrityaacademy.com ಮೂಲಕ ಪಡೆಯಬಹುದಾಗಿದೆ. ಬೇರೆ

ಬೇರೆ ಜಿಲ್ಲೆಯ ಅಭ್ಯರ್ಥಿಗಳು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಉಚಿತವಾಗಿ ಅರ್ಜಿಗಳನ್ನು ಪಡೆಯಬಹುದಾಗಿದೆ.

ಅರ್ಜಿಯ ಜೊತೆ ಇತ್ತೀಚಿತ ಪಠ್ಯಕ್ರಮವನ್ನು ಸಹ ನೀಡಲಾಗಿದೆ. ಅಂಚೆ ಮೂಲಕ ಅರ್ಜಿ ಮತ್ತು ಪಠ್ಯಕ್ರಮ ಪಡೆಯಲಿಚ್ಛಿಸುವವರು ರೂ 10.00 (ರೂಪಾಯಿ ಹತ್ತುಗಳು ಮಾತ್ರ) ಸ್ಟಾಂಪ್ ಹಚ್ಚಿದ ಸ್ವವಿಳಾಸವುಳ್ಳ ಲಕೋಟೆಯನ್ನು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು –560 002 ಇಲ್ಲಿಗೆ ಕಳುಹಿಸಿಕೊಡಬೇಕಾಗಿ ಕೋರಿದೆ. ಭರ್ತಿಮಾಡಿದ ಅರ್ಜಿಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಲು ಕೊನೆಯ ದಿನಾಂಕ 15–09–2018. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 879/979**

# ಜರಿ ರೇಷ್ಮೆ ಸೀರೆ – ಮಾರಾಟದ ಮುಂದಿನ ದಿನಾಂಕ ಪ್ರಕಟ

ಬೆಂಗಳೂರು, ಆಗಸ್ಟ್ 23, (ಕರ್ನಾಟಕ ವಾರ್ತೆ)

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಕೆ.ಎಸ್.ಐ.ಸಿ. ವತಿಯಿಂದ ಉತ್ಪಾದಿಸಲ್ಪಡುವ ಜರಿ ಸಹಿತವಾದ ರೇಷ್ಮೆ ಸೀರೆಗಳನ್ನು, ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದಾಗಿ ಪತ್ರಿಕಾ ಮಾಧ್ಯಮದ ಮುಖಾಂತರ ತಿಳಿಸಲಾಗಿತ್ತು.

ಆದರೆ ಈ ನಡುವೆ ಬಂದ ನಗರ ಸ್ಥಳೀಯ ಸಂಸ್ಥೆಗಳ "ಚುನಾವಣೆ ನೀತಿ ಸಂಹಿತೆ" ಜಾರಿಯಲ್ಲಿರುವುದರಿಂದ, ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ನೀಡಬೇಕೆಂದು ಕೊಂಡಿದ್ದ ಜರಿ ಸಹಿತ ರೇಷ್ಮೆ ಸೀರೆಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ ಹಾಗೂ ಮುಂದಿನ ದಿನಾಂಕವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ರೇಷ್ಮೆ ಮತ್ತು ಪ್ರವಾಸೋದ್ಯಮ ಸಚಿವರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.